# 4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ. ಸಂಖ್ಯೆ - 17014/2016

ಫಿರ್ಯಾದುದಾರರುಃ ಚಂದ್ರಶೇಖರ ರಾವ್

**ವಿರುದ್ಧ**

ಆರೋಪಿಃ ಶ್ರೀಮತಿ ವಿ. ರಾಜೇಶ್ವರಿ, ಇತರರು
ಕೋಂ ವಡಿವೇಲು , 48 ವರ್ಷ
ವಾಸಃ ನಂ.71, 1ನೇ ಮುಖ್ಯರಸ್ತೆ , 1ನೇ ಅಡ್ಡರಸ್ತೆ ,
ಹನುಮಾನ್ ಲೇ ಔಟ್, ತಿಂಡ್ಲು , ಬೆಂಗಳೂರು.

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ

ಪ್ರಶ್ನೆ 1) ನೀವು ಫಿರ್ಯಾದುದಾರರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಸಾಕ್ಷ್ಯ ಕೇಳಿದ್ದೀರಾ ?

ಉತ್ತರಃ

ಪ್ರಶ್ನೆ 2) ಪ್ರಾ.ಸಾ.1 ಚಂದ್ರಶೇಖರ ರಾವ್, ವಕೀಲರು ತಮ್ಮ ಸಾಕ್ಷ್ಯದಲ್ಲಿ ಅವರು ಫಿರ್ಯಾದಿದಾರರಾಗಿದ್ದು ವೆಂಕಟೇಶ ರೆಡ್ಡಿ ಹಾಗೂ ಮೂರ್ತಿ ಎನ್ನುವವರ ಮೂಲಕ ಆರೋಪಿಯಾದ ನಿಮ್ಮ ಪರಿಚಯವಾಗಿದ್ದು, ಅವರು ಒಂದು ಕಾರು ಖರೀದಿ ಮಾಡಲು ಇಚ್ಛಿಸಿದ್ದು, ಆಮೇಲೆ ಒಂದು ಇನ್ನೋವಾ ಕಾರ್ ಬಗ್ಗೆ ಆರೋಪಿಯಾದ ನಿಮೊಂದಿಗೆ ವ್ಯವಹಾರವಾಗಿ ನಿಮಗೆ ತಲಾ 2 ಚೆಕ್ ಗಳ ಮೂಲಕ 1,00,000/- ರೂಪಾಯಿ ಹಾಗೂ ನಗದಾಗಿ 3,00,000/-, 2,00,000/- ಹೀಗೆ ಒಟ್ಟು 5,00,000/- ಕೊಟ್ಟಿದ್ದು ಕಾರಿನ ಬೆಲೆ 10,00,000/- ಎಂದು ಮಾತುಕತೆಯಾಗಿದ್ದು ಕಾರನ್ನು ಅವರಿಗೆ trial base ಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ 3) ಪ್ರಾ.ಸಾ.1 ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕಃ 22.10.2014 ರಂದು ಹಣಕಾಸು ಸಂಸ್ಥೆಯವರು ಬಂದು ಅವರ ಸಾಲ ಇನ್ನೂ ತೀರಿಲ್ಲ ಎಂದು ಹೇಳಿ ಕಾರನ್ನು ಅವರಿಂದ ವಾಪಸ್ಸು ತೆಗೆದುಕೊಂಡು ಹೋಗಿದ್ದು ಆಮೇಲೆ ಆರೋಪಿಯಾದ ನೀವು ಅವರಿಗೆ ಕಾರನ್ನೇ ಕೊಟ್ಟಿಲ್ಲ ಎಂದು ಹೇಳಿದ್ದು ಇದರಿಂದ ಅವರಿಗೆ ಕಾರು ಸಿಗಲಿಲ್ಲ ಮತ್ತು ಅವರು ಕೊಟ್ಟ ಹಣ ಕೂಡ ವಾಪಸ್ಸು ಬರದೆ ಇದ್ದು ಆರೋಪಿಯಾದ ನೀವು ಅಪರಾಧಿಕ ನಂಬಿಕೆ ದ್ರೋಹ ಮತ್ತು ವಂಚನೆ ಮಾಡಿದ್ದು ಎಲ್ಲಾ ದಾಖಲೆಗಳನ್ನು

ದೂರಿನೊಂದಿಗೆ ಹಾಜರುಪಡಿಸಿದ್ದು ನಿಮ್ಮ ವಿರುದ್ದ ಯೋಗ್ಯ ಕ್ರಮ ತೆಗೆದುಕೊಳ್ಳಲು ಕೋರಿರುವುದಾಗಿ ಹೇಳುತ್ತಾರೆ . ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ 4) ಪ್ರಾ.ಸಾ.1 ತಮ್ಮ ಮುಂದುವರಿದ ಸಾಕ್ಷ್ಯ ದಲ್ಲಿ ಅವರು ಚೆಕ್ ಮೂಲಕ ರೂ.2,00,000/- ಒಂದು ಚೆಕ್, ರೂ.1,00,000/- ರ ಇನ್ನೊಂದು ಚೆಕ್ ಹಾಗೂ ರೂ.2,00,000/- ಹಣ ನಗದು ರೂಪದಲ್ಲಿ ಆರೋಪಿಯಾದ ನಿಮಗೆ ಹಣವನ್ನು ಕೊಟ್ಟಿದ್ದು, ಸದರಿ ಚೆಕ್ ಮೂಲಕ ಕೊಟ್ಟ ಹಣ ಆರೋಪಿಯಾದ ನಿಮ್ಮ ಖಾತೆಗೆ ಜಮಾ ಆಗಿದ್ದು, ಆ ಬಗ್ಗೆ ಅವರು ಎರಡು ಬ್ಯಾಂಕ್ ಸ್ಟೇಟ್ ಮೆಂಟ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.1 ಮತ್ತು 2 ಎಂದು ಗುರುತಿಸಲಾಗಿದೆ , ಸೇಲ್ ರಶೀದಿ ನಿ.ಪಿ.3, ಟ್ರಾನ್ಸ್ ಫರ್ ಆಫ್ ಇನ್ಸ್ಯೂರೆನ್ಸ್ ಫಾರಂ ನಿ.ಪಿ.4, authorization letter ನಿ.ಪಿ.5, Issue of clearance certificate ನಿ.ಪಿ.6, Form No.29 in duplicate ನಿ.ಪಿ.7, Form No.30 ನಿ.ಪಿ.8, police complaint endorsement ನಿ,ಪಿ.9 ಎಂದು ಗುರುತಿಸಲಾಗಿದ್ದು ನೀವು transfer clearance ಮಾಡಿಕೊಟ್ಟ ನಂತರ ಅವರ ಹೆಸರಿಗೆ ಕಾರನ್ನು ರಿಜಿಸ್ಟರ್ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ, ಆದರೆ ನೀವು ಕಾರನ್ನು ಕೊಡಲಿಲ್ಲ ನಂತರ ಸದರಿ ಕಾರನ್ನು ಫೈನಾನ್ಸ್ ನವರು ಜಪ್ತಿ ಮಾಡಿಕೊಂಡು ಹೋಗಿದ್ದು ನಿಮ್ಮನ್ನು ದುಡ್ಡು ಕೇಳಲು ಹೋದಾಗ ನೀವು ಅವರಿಂದ ಹಣವನ್ನೇ ಪಡೆದಿಲ್ಲ ಎಂದು ಹೇಳಿದಿರಿ ಆದ್ದರಿಂದ ನಿಮ್ಮ ವಿರುದ್ದ ಯೋಗ್ಯ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುವುದಾಗಿ ಹೇಳುತ್ತಾರೆ . ನೀವು ಏನು ಹೇಳುವಿರಿ ?

ಉತ್ತರಃ

ಪ್ರಶ್ನೆ 5) ನಿಮ್ಮ ಪರ ಏನಾದರೂ ರಕ್ಷಣಾ ಸಾಕ್ಷ್ಯ ಇದೆಯೇ ?
ಉತ್ತರಃ

ಪ್ರಶ್ನೆ 6) ಈ ಕುರಿತು ನೀವು ಹೆಚ್ಚಿಗೆ ಏನಾದರು ಹೇಳುವುದಿದೆಯೇ ?

ಉತ್ತರಃ

ಮೇಲಿನ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು ಆರೋಪಿ ಸರಿ ಇದೆ ಎಂದು ಒಪ್ಪಿ ನನ್ನ ಸಮಕ್ಷಮ ಸಹಿ ಮಾಡಿದ್ದಾರೆ.

ದಿನಾಂಕಃ 24/12/2024
ಬೆಂಗಳೂರು.

4ನೇ ಅಪರ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು.